# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2131
2. ಸದಸ್ಯರ ಹೆಸರು : ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 18.03.2022
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

**(ಕೃಷಿ ಇಲಾಖೆಯಿಂದ ವರ್ಗಾವಣೆಯಾಗಿರುವ ಪ್ರಶ್ನೆ)**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಖರೀದಿಸುತ್ತಿರುವ ಕೃಷಿ ಉತ್ಪನ್ನಗಳು ಯಾವುವು; ಈ ಉತ್ಪನ್ನಗಳನ್ನು ಖರೀದಿಸಲು ಸರ್ಕಾರವು ರೂಪಿಸಿರುವ ನಿಯಮ ಮತ್ತು ನಿಬಂಧನೆಗಳೇನು; (ಆದೇಶಗಳ ಸಹಿತ ವಿವರ ನೀಡುವುದು). | 2021-22ನೇ ಸಾಲಿನಲ್ಲಿ ರಾಜ್ಯದ ಮಾರುಕಟ್ಟೆಗಳಲ್ಲಿ ತೊಗರಿ, ಹೆಸರುಕಾಳು, ಉದ್ದಿನಕಾಳು, ರಾಗಿ, ಜೋಳ, ಭತ್ತ ಸೂರ್ಯಕಾಂತಿ, ಶೇಂಗಾ, ಕಡಲೆಕಾಳು, ಸೋಯಾಬೀನ್, ಕೊಬ್ಬರಿ ಮತ್ತು ಹತ್ತಿ ಉತ್ಪನ್ನಗಳ ಧಾರಣೆ ಕಡಿಮೆಯಾದ ಹಿನ್ನೆಲೆಯಲ್ಲಿ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರೈತರಿಂದ ಖರೀದಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಕೇಂದ್ರ ಸರ್ಕಾರವು ಮುಂಗಾರು ಮತ್ತು ಹಿಂಗಾರು ಹಂಗಾಮಗಳ ಪೂರ್ವದಲ್ಲಿ ಬೆಂಬಲ ಬೆಲೆಯನ್ನು ಘೋಷಿಸುತ್ತದೆ. ರಾಜ್ಯದಲ ಪ್ರಮುಖ ಮಾರುಕಟ್ಟೆಗಳಲ್ಲಿ ಕೇಂದ್ರ ಸರ್ಕಾರವು ಘೋಷಿಸುವ ಬೆಂಬಲ ಬೆಲೆಗಿಂತ ಕಡಿಮೆ ಧಾರಣೆಯಲ್ಲಿ ಮಾರಾಟವಾಗುವ ಸಂದರ್ಭಗಳಲ್ಲಿ ಬೆಂಬಲ ಬೆಲೆ ಯೋಜನೆಯನ್ನು ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುತ್ತದೆ.<br><br>ಉತ್ಪನ್ನಗಳನ್ನು ಖರೀದಿಸಲು ಸರ್ಕಾರವು ರೂಪಿಸಿರುವ ಮಾರ್ಗಸೂಚಿಗಳನ್ನು **ಅನುಬಂಧ-1**ರಲ್ಲಿ ಒದಗಿಸಿದೆ. |
| ಆ) | ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಉತ್ಪಾದನೆಯಾದ ಕೃಷಿ ಉತ್ಪನ್ನಗಳ ಪ್ರಮಾಣವೆಷ್ಟು; ಈ ಸಾಲುಗಳಲ್ಲಿ ಬೆಂಬಲ ಬೆಲೆ ಯೋಜನೆಯಡಿ ಸರ್ಕಾರ ಖರೀದಿಸಬೇಕಾದ ಕೃಷಿ ಉತ್ಪನ್ನಗಳ ಪ್ರಮಾಣದ ಗುರಿ ಎಷ್ಟು; ಇದರಲ್ಲಿ, ರೈತರಿಂದ ಖರೀದಿಸಿದ ಪ್ರಮಾಣವೆಷ್ಟು; ಪ್ರತಿ ಕ್ವಿಂಟಾಲಿಗೆ ಸರ್ಕಾರ ನೀಡಿದ ಬೆಲೆ ಎಷ್ಟು; (ವರ್ಷವಾರು ಮತ್ತು ಉತ್ಪನ್ನವಾರು ಸಂಪೂರ್ಣ ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಉತ್ಪಾದನೆಯಾದ ಕೃಷಿ ಉತ್ಪನ್ನಗಳ ಪ್ರಮಾಣದ ವಿವರವನ್ನು **ಅನುಬಂಧ-2**ರಲ್ಲಿ ಒದಗಿಸಿದೆ.<br><br>ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರವು ಅನುಮೋದಿಸಿರುವಂತೆ ಖರೀದಿಸಬೇಕಾದ ಕೃಷಿ ಉತ್ಪನ್ನಗಳ ಪ್ರಮಾಣ, ಖರೀದಿಸಿದ ಪ್ರಮಾಣ, ಪ್ರತಿ ಕ್ವಿಂಟಾಲ್‌ಗೆ ನೀಡಿದ ಬೆಲೆಯ ವಿವರಗಳನ್ನು **ಅನುಬಂಧ-3**ರಲ್ಲಿ ಒದಗಿಸಿದೆ. |

| | | |
|---|---|---|
| ಇ) | ಬೆಂಬಲ ಬೆಲೆ ಯೋಜನೆಯಡಿ ಸರ್ಕಾರವು ಖರೀದಿಸುವ ಕೃಷಿ ಉತ್ಪನ್ನಗಳ ಪ್ರಮಾಣಕ್ಕೆ ಮಿತಿ ಹೇರಿರುವುದರಿಂದ, ರೈತರಿಗೆ ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | ಆಹಾರ ಧಾನ್ಯಗಳಿಗೆ ಸಂಬಂಧಿಸಿದಂತೆ ರೈತರಿಗೆ ಆಗುತ್ತಿರುವ ತೊಂದರೆಗಳು ಗಮನಕ್ಕೆ ಬಂದಿದೆ. ಇದಕ್ಕೆ ಸಂಬಂಧಿಸಿದಂತೆ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>• 2021-22ನೇ ಸಾಲಿನ ಮುಂಗಾರು ಋತುವಿನಲ್ಲಿ ಕೇಂದ್ರ ಸರ್ಕಾರವು ಅನುಮತಿಸಿರುವಂತೆ 5.00 ಲಕ್ಷ ಮೆಟ್ರಿಕ್ ಟನ್ ಭತ್ತವನ್ನು ಪ್ರತಿ ರೈತರಿಂದ ಉತ್ಪಾದನೆಗೆ ಅನುಗುಣವಾಗಿ ಪ್ರತಿ ಎಕರೆಗೆ 25 ಕ್ವಿಂಟಾಲ್‌ನಂತೆ ಗರಿಷ್ಠ 40 ಕ್ವಿಂಟಾಲ್ ಪ್ರಮಾಣವನ್ನು ಖರೀದಿಸಲಾಗುತ್ತಿದೆ.<br>• ರಾಜ್ಯದ ಸಣ್ಣ ಮತ್ತು ಅತೀ ಸಣ್ಣ ರೈತರಿಂದ ಪ್ರತಿ ಎಕರೆಗೆ 10 ಕ್ವಿಂಟಾಲ್‌ನಂತೆ ಮತ್ತು ಗರಿಷ್ಠ 20 ಕ್ವಿಂಟಾಲ್‌ನಂತೆ 2.10 ಲಕ್ಷ ಮೆಟ್ರಿಕ್ ಟನ್ ರಾಗಿಯನ್ನು ಖರೀದಿಸಲಾಗುತ್ತಿದೆ.<br>• 3. 1.10 ಲಕ್ಷ ಮೆಟ್ರಿಕ್ ಟನ್ ಜೋಳವನ್ನು ರೈತರು ಹೊಂದಿರುವ ಜಮೀನಿಗೆ ಅನುಗುಣವಾಗಿ ಪ್ರತಿ ಎಕರೆಗೆ 10 ಕ್ವಿಂಟಾಲ್‌ನಂತೆ ಗರಿಷ್ಠ ಮಿತಿಯಿಲ್ಲದೆ ಜೋಳವನ್ನು ಖರೀದಿಸಲಾಗುತ್ತಿದೆ. |

ಸಂಖ್ಯೆ: ಸಿಒ 85 ಎಂಆರ್‌ಇ 2022

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು.

**Guidelines for Revolving Fund maintenance by Karnataka State Agricultural Marketing Board and the procuring agencies on receipt of funds to carry out procurement operations:**

1.0 In accordance with the G.O.No.CMW 239 MRE 97, dt.24.11.1999, the Managing Director, Karnataka State Agricultural Marketing Board shall maintain a separate Bank A/c. (Nationalised Bank) having an exclusive Pass Book for Revolving Fund, which should be subject to Audit.

1.1 All releases by the Managing Director, Karnataka State Agricultural Marketing Board out of the Revolving Fund should be as per the decision taken in the State Level Committee and Cabinet Sub-Committee.

1.2 The Managing Director, Karnataka State Agricultural Marketing Board shall furnish fortnightly report providing the details of contributions received, funds released - agency wise indicating the commodity against which the releases are effected and the balance to the Chairman, State Level Committee.

1.3 The outstanding statements should also be furnished on monthly basis to the Chairman, State Level Committee, Principal Secretary, Co.operation and Secretary, Finance (Budget) to direct the agencies for prompt repayments.

**Guidelines and Procedures for drawing Revolving Fund for procurement operations by the procuring agencies enlisted in the G.O.No.CMW 239 MRE 97, dt.24.11.1999:**

2.0 In pursuance of the resolution of the State Level Committee/Cabinet Sub-Committee, the M.D's of the procuring agency should place their indent in writing to M.D., Karnataka State Agricultural Marketing Board for release of funds.

2.1 The M.D., Karnataka State Agricultural Marketing Board shall release such amounts decided by resolution of the State Level Committee/Cabinet Sub-Committee.

2.2 The M.D's of the procuring agencies, after getting released the funds, shall open a separate account in a Nationalised Bank in the name of Revolving Fund and deposit the amounts released. For no reason, whatsoever, this amount should be merged with other accounts of procuring agencies. This arrangement shall be subjected to verification by the Auditors/Officers of the K.S.A.M.B. as and when necessary.

2.3 For all releases out of Revolving Fund, the Managing Director of the procurement agency nominated shall undertake to repay immediately on sale of commodities procured under Floor Price Scheme and in case of bridge loan released for commencing the procurement under Price Support Scheme, pending intervention by the nodal agency, the repayment should be made immediately on receipt of the funds from the nodal agency viz., FCI, NAFED. (Format No.3)

The M.D's of procuring agency should first settle the Revolving Fund account and clear the bridge loan and thereafter persuade the nodal agency (FCI, NAFED) for prompt payments to continue the procurement. For no reason, whatsoever, the Revolving Fund should be retained after the nodal agencies start releasing the funds.

2.4 The M.D's of procuring agency should furnish monthly reports to the Chairman, State Level Committee, Principal Secretary, Co.operation and Secretary, Finance Department (Budget) and the Managing Director, Karnataka State Agricultural Marketing Board giving clear picture of the funds got released, the quantity procured and its value, balance amount remaining in the Revolving Fund account. In case of sale of stocks, the amounts realised should also appear in the statement (In format No.1 and 2)

2.5 At the end of transaction, an audited account should be furnished.

2.6 The M.D's of the procuring agencies should claim interest for the period revolving fund is being utilised by the nodal agencies and remit back to Revolving Fund account. If such actions are not taken, the procuring agencies shall be liable to pay interest for the period Revolving Fund is retained. For any reason, whatsoever, if the Purchase Agency's retain the Revolving Fund either after disposal of the stocks procured under [illegible] Price Scheme or after the settlement of payments by the nodal

agencies, the Purchase Agency's are liable to pay the interest at the prevailing bank rate.

2.7 The procurement progress report shall be furnished on daily/weekly basis with details of quantity procured centrewise, value and the quantity deposited in the Warehouses to the M.D., KSAMB, apart from furnishing it to the other concerned Departments.

2.8 The incidental and all other charges to be incurred under Floor Price/Market Intervention Scheme by the Purchase Agency to be got approved by the State Level Committee. The M.D., KSAMB will arrange to take this subject before commencement of the procurement to the State Level Committee. And the MD's of the procuring agency shall provide the required information.

2.9 The incidental charges, shortages and all other charges in case of Price Support Scheme to be decided upon mutually between the sub-agencies of the State and the Nodal agencies, and for no reason, whatsoever, such mutually agreed charges should be violated.

2.10 The KSAMB shall verify the books of accounts of the procuring agencies concerning the revolving fund utilization on a quarterly basis through its Chief Auditor.

** *** **

ಸರ್ಕಾರದ ಆದೇಶ ಸಂಖ್ಯೆ: ಸಇ 210 ಎಂಆರ್‌ಇ 2005 ದಿನಾಂಕ: 25/07/2005 ರ ಅನುಬಂಧ

**ಪೀಠಿಕೆ:-**

ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಬೆಲೆಗಳು ಮಾರುಕಟ್ಟೆಯಲ್ಲಿ ಕುಸಿತವಾದಾಗ ರೈತರು ಒತ್ತಡದ ಪರಿಸ್ಥಿತಿಯಲ್ಲಿ ಮಾರಾಟ ಮಾಡುವುದರಿಂದ ರಕ್ಷಿಸಲು ಮಾರುಕಟ್ಟೆ ಮಧ್ಯ ಪ್ರವೇಶ ಮೂಲಕ ಬೆಂಬಲ ಬೆಲೆ ಯೋಜನೆಯನ್ನು ಜಾರಿಗೊಳಿಸಲಾಗುವುದು.

ಆಲೂಗಡ್ಡೆ, ಈರುಳ್ಳಿ, ಟೊಮ್ಯಾಟೋ, ಮೆಣಸಿನಕಾಯಿ ಮತು ಹಸಿಮೆಣಸಿನಕಾಯಿಗಳಂತಹ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಯೋಜನೆ ಇರುವುದಿಲ್ಲ. ಅದರಿಂದಾಗಿ ರೈತರು ಒತ್ತಡದ ಪರಿಸ್ಥಿತಿಯಲ್ಲಿ ಮಾರಾಟ ಮಾಡಿ ನಷ್ಟವನ್ನು ಅನುಭವಿಸಿದಂತಾಗುತ್ತದೆ.

ಬೆಂಬಲ ಬೆಲೆ ಯೋಜನೆಯು ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳಿಗೆ ಇಡೀ ಕರ್ನಾಟಕ ರಾಜ್ಯ ವ್ಯಾಪ್ತಿಗೆ ಅನ್ವಯವಾಗುವುದು.

ಈ ಯೋಜನೆಯು ಕರ್ನಾಟಕ ರಾಜ್ಯದಲ್ಲಿ ಬೆಳೆದ ಈರುಳ್ಳಿ, ಆಲುಗಡ್ಡೆ, ಟೊಮ್ಯಾಟೋ ಮತ್ತು ಹಸಿಮೆಣಸಿನಕಾಯಿಗಳಿಗೆ ಅನ್ವಯವಾಗುವುದು. ಅಲ್ಲದೇ ಸರ್ಕಾರವು ಪರಿಗಣಿಸಿದಲ್ಲಿ ಇತರೇ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳಿಗೆ ವಿಸ್ತರಿಸಬಹುದಾಗಿದೆ. ಬೆಂಬಲ ಬೆಲೆ ಯೋಜನೆಯನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯೊಡನೆ ಈ ಕನಿಷ್ಠ ಬೆಂಬಲ ಬೆಲೆ ಯೋಜನೆ ವ್ಯಾಪ್ತಿಗೆ ಬರುವ ಉತ್ಪನ್ನಗಳಿಗಾಗಿ ಅನುಷ್ಠಾನಗೊಳಿಸಬಹುದಾಗಿದೆ.

**2) ಬೆಂಬಲ ಬೆಲೆ ನಿಗದಿಗೊಳಿಸುವುದು:-**

ಈ ಯೋಜನೆಯಡಿ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳಿಗಾಗಿ ಬೆಂಬಲ ಬೆಲೆಯನ್ನು ಕರ್ನಾಟಕ ಕೃಷಿ ಬೆಲೆ ಆಯೋಗದೊಡನೆ ಸಮಾಲೋಚಿಸಿ ರಾಜ್ಯಮಟ್ಟದ ಸಲಹಾ ಸಮಿತಿಯ ಶಿಫಾರಸ್ಸಿನಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಸಿಪಿ (ಸಿಪಿಎಸ್‌ಸಿ) 14/2004 ದಿನಾಂಕ:16/11/2004 ರಲ್ಲಿ ಖರೀದಿ ಸಂಗ್ರಹಣೆ ಪ್ರಕ್ರಿಯೆಗೆ ಸಂಬಂಧಪಟ್ಟಂತೆ ರಚಿಸಲ್ಪಟ್ಟ ಸಚಿವ ಸಂಪುಟ ಉಪ ಸಮಿತಿಯು ಅಂತಿಮವಾಗಿ ಬೆಂಬಲ ಬೆಲೆಯನ್ನು ನಿಗದಿಗೊಳಿಸುವುದು.

ಎಫ್‌ಎಕ್ಯೂ ಗುಣಮಟ್ಟದ ನಿಗದಿತ ಉತ್ಪನ್ನಗಳ ಬೆಂಬಲ ಬೆಲೆಯು ಸಚಿವ ಸಂಪುಟದ ಉಪ ಸಮಿತಿಯು ನಿರ್ಧರಿಸಿದನುಗುಣವಾಗಿರುತ್ತದೆ.

**3) ರಾಜ್ಯ ಮಟ್ಟದ ಸಲಹಾ ಸಮಿತಿ:-** ರಾಜ್ಯ ಮಟ್ಟದ ಸಲಹಾ ಸಮಿತಿಯನ್ನು ರಚಿಸಲ್ಪಟ್ಟಿದೆ.

ಈ ಕೆಳಕಂಡ ಸದಸ್ಯನೊಳಗೊಂಡ ಒಂದು ರಾಜ್ಯ ಮಟ್ಟದ ಸಲಹಾ ಸಮಿತಿಯನ್ನು ರಚಿಸಲ್ಪಟ್ಟಿದೆ.

| | | |
|---|---|---|
| 1 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು- | ಅಧ್ಯಕ್ಷರು |
| | ಕಂ-ಕೃಷಿ ಉತ್ಪಾದನಾ ಆಯುಕ್ತರು, ಕರ್ನಾಟಕ ಸರ್ಕಾರ. | ಸದಸ್ಯರು |
| 2 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ. | ಸದಸ್ಯರು |
| 3 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ. | ಸದಸ್ಯರು |
| 4 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ. | ಸದಸ್ಯರು |
| 5 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು. ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ. | ಸದಸ್ಯರು |
| 6 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವಿಷಯಗಳ ಇಲಾಖೆ, ಕರ್ನಾಟಕ ಸರ್ಕಾರ. | ಸದಸ್ಯರು |
| 7 | ಛೇರ್‌ಮನ್, ಕರ್ನಾಟಕ ಬೆಲೆ ಆಯೋಗ, ಬೆಂಗಳೂರು. | ಸದಸ್ಯರು |

| | | |
|---|---|---|
| | ಹಿರಿಯ ಪ್ರಾದೇಶಿಕ ವ್ಯವಸ್ಥಾಪಕರು, ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾ, ಬೆಂಗಳೂರು. | ಸದಸ್ಯರು |
| | ಬ್ರಾಂಚ್ ಮೇನೇಜರ್, ನ್ಯಾಫೆಡ್, ಭಾರತ ಸರ್ಕಾರ, ನಂ.8, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು. | ಸದಸ್ಯರು |
| 10 | ಪ್ರಾದೇಶಿಕ ಮೇನೇಜರ್, ಕೇಂದ್ರೀಯ ಉಗ್ರಾಣ ನಿಗಮ, ಭಾರತ ಸರ್ಕಾರ, ಬೆಂಗಳೂರು | ಸದಸ್ಯರು |
| 11 | ಸಹಾಯಕ ನಿರ್ದೇಶಕರು, ಭಾರತೀಯ ಹತ್ತಿ ನಿಗಮ. ಬೆಂಗಳೂರು. | ಸದಸ್ಯರು |
| 12 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ನಿಯಮಿತ, ಬೆಂಗಳೂರು. | ಸದಸ್ಯರು |
| 13 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಬೆಂಗಳೂರು | ಸದಸ್ಯರು |
| 14 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಎಣ್ಣೆ ಬೀಜಗಳ ನಿಗಮ, ಬೆಂಗಳೂರು. | ಸದಸ್ಯರು |
| 15 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ, ಬೆಂಗಳೂರು | ಸದಸ್ಯರು |
| 16 | ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು. | |
| 17 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೃಷಿ ಉತ್ಪಾದನಾ ರಫ್ತು ನಿಗಮ, ಬೆಂಗಳೂರು. | ಸದಸ್ಯರು |
| 18 | ವ್ಯವಸ್ಥಾಪಕ ನಿರ್ದೇಶಕರು, ತೋಟಗಾರಿಕೆ ಉತ್ಪಾದನಾ ಸಹಕಾರ ಮಾರಾಟ ಸಂಘ ನಿಯಮಿತ, ಬೆಂಗಳೂರು. | ಸದಸ್ಯರು |
| 19 | ಆಯುಕ್ತರು/ ಕೃಷಿ ಮಾರಾಟ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ. | ಸದಸ್ಯ ಕಾರ್ಯದರ್ಶಿ |
| 20 | ಅಧ್ಯಕ್ಷರ ಸೂಚನೆ ಮೇರೆಗೆ ಇತರೆ ಅಧಿಕಾರಿಗಳು | |

3.1) ರಾಜ್ಯ ಮಟ್ಟದ ಸಲಹಾ ಸಮಿತಿ ಸಭೆಯನ್ನು ಬಿತ್ತನೆ ಹಂಗಾಮು ಪ್ರಾರಂಭವಾಗುವ ಮುನ್ನ ಏರ್ಪಡಿಸಲಾಗುವುದು. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಇವರು ರಾಜ್ಯ ಮಟ್ಟದ ಸಲಹಾ ಸಮಿತಿಗೆ ಉತ್ಪನ್ನವಾಗಬಹುದಾದ ಕೃಷಿ ಉತ್ಪನ್ನಗಳ ಬಗ್ಗೆ ಮಾಹಿತಿ, ಮಾರಾಟಕ್ಕಾಗಿ ಹೆಚ್ಚುವರಿಯಾಗಬಹುದಾದ ಉತ್ಪನ್ನಗಳ ಅಂದಾಜು, ಮಾರುಕಟ್ಟೆಗಳಿಗೆ ಬರಬಹುದಾದ ಉತ್ಪನ್ನಗಳು, ರಾಷ್ಟ್ರ ಮಟ್ಟದ ಹಾಗೂ ರಾಜ್ಯ ಮಟ್ಟದ, ನೋಂದಾಯಿತ ಸಂಸ್ಥೆಗಳವರ ತಜ್ಞರ ಅಭಿಪ್ರಾಯ ಮತ್ತು ವೈಜ್ಞಾನಿಕ ಆಧಾರದ ಮೇಲೆ ಮಾರುಕಟ್ಟೆಯಲ್ಲಿ ಉಂಟಾಗಬಹುದಾದ ಬೆಲೆಗಳ ವ್ಯತ್ಯಾಸಗಳ ಬಗ್ಗೆ ಮುಂಗಡ ಮಾಹಿತಿಯನ್ನು ಒದಗಿಸುವುದು. ಈ ಪ್ರಕ್ರಿಯೆಯಿಂದ ಆಯಾ ವರ್ಷದಲ್ಲಿ ಮಾರುಕಟ್ಟೆಯಲ್ಲಿನ ಹೆಚ್ಚುವರಿಯ ಶೇ.10ರಷ್ಟು ವಿವಿಧ ಉತ್ಪನ್ನಗಳನ್ನು ಖರೀದಿ ಸಂಗ್ರಹಣೆ ಮಾಡಲು ಮತ್ತು ವಿಶೇಷ ಸಂದರ್ಭಗಳಲ್ಲಿ ಮಾರುಕಟ್ಟೆಯಲ್ಲಿನ ಹೆಚ್ಚುವರಿಯ ಶೇ.20ರಷ್ಟನ್ನು ಖರೀದಿಸಲು ಬೇಕಾಗುವ ಹಣಕಾಸಿನ ಮೊತ್ತದ ಬಿಡುಗಡೆಗಾಗಿ ನಿರ್ಧರಿಸಬಹುದಾಗಿದೆ.

3.2) ಮಾರುಕಟ್ಟೆಯ ಮಧ್ಯಪ್ರವೇಶದ ಅವಶ್ಯಕತೆಯನ್ನು ಪರಿಶೀಲಿಸಿ ರಾಜ್ಯಮಟ್ಟದ ಸಲಹಾ ಸಮಿತಿಯು ಸಚಿವ ಸಂಪುಟದ ಉಪ ಸಮಿತಿಗೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವುದು. ರಾಜ್ಯಮಟ್ಟದ ಸಲಹಾ ಸಮಿತಿಯು, ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಯೋಜನೆ ಜಾರಿಗೊಳಿಸುವ ಜಿಲ್ಲಾ ಮಟ್ಟದ ಏಜನ್ಸಿಗೆ ಮಾರ್ಗಸೂಚಿಗಳನ್ನು ಹೊರಡಿಸಲು ಅಧಿಕಾರ ಉಳ್ಳದ್ದಾಗಿರುತ್ತದೆ, ಅವಶ್ಯಕತೆಗನುಗುಣವಾಗಿ ಸಭೆ ಸೇರಿ

ಬೆಂಬಲ ಬೆಲೆಯ ಯೋಜನೆಯನ್ನು ಅಂತಿಮಗೊಳಿಸುವುದು. ಈ ಬೆಂಬಲ ಬೆಲೆ ಯೋಜನೆಗೆ ಅವಶ್ಯಕವಾದ ಮೊತ್ತವನ್ನು ಸಹಕಾರ ಇಲಾಖೆ ಕರ್ನಾಟಕ ಸರ್ಕಾರ ಇವರ ಆದೇಶದಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ನಿರ್ವಹಿಸುವ ಆವರ್ತನಿಧಿಯಿಂದ ಭರಿಸತಕ್ಕದ್ದು. ಕರ್ನಾಟಕ ಕೃಷಿ ಆಯೋಗದೊಂದಿಗೆ ಸಮಾಲೋಚಿಸಿ, ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಅಳವಡಿಸದಿರದ ಘೋಷಿತ ಉತ್ಪನ್ನಗಳಿಗೆ ಫೇರ್ ಆವರೇಜ್ ಗುಣಮಟ್ಟದ ಪ್ರಮಾಣಗಳನ್ನು ನಿಗಧಿಪಡಿಸುವುದು. ಖರೀದಿ ಏಜನ್ಸಿಗಳ ಚಟುವಟಿಕೆಗಳನ್ನು ಅವುಗಳ ಯೋಜನೆಯನ್ನು ಯಶಸ್ವಿ ಅನುಷ್ಠಾನದಲ್ಲಿ ಮಾಡಿದ ವೆಚ್ಚವನ್ನೊಳಗೊಂಡಂತೆ ಅವುಗಳ ಚಟುವಟಿಕೆಗಳನ್ನು ಕಾಲಕಾಲಕ್ಕೆ ಪರಿಶೀಲಿಸುವುದು.

4) **<u>ಜಿಲ್ಲಾಮಟ್ಟದ ಸಲಹಾ ಸಮಿತಿ:</u>**

ಪ್ರತಿಯೊಂದು ಕಂದಾಯ ಜಿಲ್ಲೆಗೊಂದರಂತೆ ಈ ಕೆಳಕಂಡ ಸದಸ್ಯರನ್ನೊಳಗೊಂಡ ಜಿಲ್ಲಾಮಟ್ಟದ ಸಲಹಾ ಸಮಿತಿಯು ಇರತಕ್ಕದ್ದು:-

| | | |
|---|---|---|
| 1 | ಜಿಲ್ಲೆಯ ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು | ಸದಸ್ಯರು |
| 3 | ಜಿಲ್ಲಾ ತೋಟಗಾರಿಕೆ ಅಧಿಕಾರಿಗಳು, ತೋಟಗಾರಿಕೆ ಇಲಾಖೆ | ಸದಸ್ಯರು |
| 4 | ಜಿಲ್ಲಾ ಕೃಷಿ ಅಧಿಕಾರಿಗಳು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 5 | ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕರು | ಸದಸ್ಯರು |
| 6 | ಜಿಲ್ಲೆಯ ಲೀಡ್ ಬ್ಯಾಂಕಿನ ಪ್ರತಿನಿಧಿಗಳು | ಸದಸ್ಯರು |
| 7 | ಖರೀದಿ ಏಜನ್ಸಿ | ಸದಸ್ಯರು |
| 8 | ಜಿಲ್ಲೆಯ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯ ಕಾರ್ಯದರ್ಶಿ |
| 9 | ಕಾಲಕಾಲಕ್ಕೆ ಅಧ್ಯಕ್ಷರು ಸೂಚಿಸಿದ ಇತರೆ ಅಧಿಕಾರಿ/ಏಜನ್ಸಿ | ಸದಸ್ಯರು |

4.1) **<u>ಜಿಲ್ಲಾ ಮಟ್ಟದ ಸಲಹಾ ಸಮಿತಿಯ ಕರ್ತವ್ಯಗಳು:</u>**

ಯೋಜನೆಯ ಯಶಸ್ವಿ ಅನುಷ್ಠಾನಗೊಳಿಸುವಿಕೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯ ಹಾಗೂ ಜಿಲ್ಲಾ ಮಟ್ಟದ ಸಲಹಾ ಸಮಿತಿಯ ನಿರ್ಣಯಗಳನ್ನು ಜಾರಿಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವುದು. ಫೇರ್ ಅವರೇಜ್ ಗುಣಮಟ್ಟದ ಉತ್ಪನ್ನಗಳನ್ನು ನಿಜವಾದ ರೈತರಿಂದ ಮಾತ್ರ ಖರೀದಿಸುವಿಕೆಯನ್ನು ಖಚಿತಗೊಳಿಸಿಕೊಳ್ಳುವುದು. ಉತ್ಪನ್ನಗಳ ಖರೀದಿ ಸಂಗ್ರಹಣಾ ಪ್ರಕ್ರಿಯೆಯ ಮೇಲ್ವಿಚಾರಣೆ ಕೈಗೊಳ್ಳುವುದು, ಅವುಗಳ ವೈಜ್ಞಾನಿಕ ದಾಸ್ತಾನು ಮತ್ತು ಸಂದರ್ಭಾನುಸಾರ ಮಾರಾಟ ಹಾಗೂ ಸಚಿವ ಸಂಪುಟದ ಉಪ ಸಮಿತಿ, ರಾಜ್ಯ ಮಟ್ಟದ ಸಲಹಾ ಸಮಿತಿ ಇವರುಗಳು ಹೊರಡಿಸಿದ ಮಾರ್ಗಸೂಚಿಗಳು ಮತ್ತು ನಿರ್ದೇಶಗಳನ್ವಯ ಕ್ರಮ ಕೈಗೊಳ್ಳುವುದು. ಯಾವುದೇ ತೊಂದರೆಗಳು ಉದ್ಭವಿಸಿದಾಗ ಜಿಲ್ಲಾ ಮಟ್ಟದ ಸಲಹಾ ಸಮಿತಿಯ ಅಧ್ಯಕ್ಷರು, ಆಯುಕ್ತರು, ಕೃಷಿ ಮಾರಾಟ ಇಲಾಖೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೃಷಿ ಮಾರಾಟ ಮಂಡಳಿ ಇವರನ್ನು ಅವಶ್ಯ ನಿರ್ದೇಶನಗಳಿಗಾಗಿ ಸಂಪರ್ಕಿಸಿ ಆ ಪ್ರಕಾರ ಅಗತ್ಯ ಕ್ರಮ ಕೈಗೊಳ್ಳುವುದು.

5) <u>ಖರೀದಿ ಏಜನ್ಸಿ:</u>

ಈ ಕೆಳಗೆ ಗೊತ್ತುಪಡಿಸಿದ ಖರೀದಿ ಏಜನ್ಸಿಯವರು ಮಾರುಕಟ್ಟೆ ಪ್ರವೇಶಿಸಬಹುದು ಹಾಗೂ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳನ್ನು ಖರೀದಿಸುವುದು:-

| | |
|---|---|
| | ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ, ಬೆಂಗಳೂರು |
| 2 | ತೋಟಗಾರಿಕೆ ಉತ್ಪನ್ನಗಳ ಸಹಕಾರ ಮಾರಾಟ ಸಂಘ ನಿಯಮಿತ, ಬೆಂಗಳೂರು |
| 3 | ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ಬೆಂಗಳೂರು |
| 4 | ತಾಲ್ಲೂಕು ವ್ಯವಸಾಯ ಉತ್ಪನ್ನ ಸಹಕಾರ ಮಾರಾಟ ಸಂಘಗಳು, ಬೆಂಗಳೂರು |
| 5 | ಕರ್ನಾಟಕ ಗ್ರಾಹಕರ ಮಾರಾಟ ಮಹಾ ಮಂಡಳ, ಬೆಂಗಳೂರು |
| 6 | ಕರ್ನಾಟಕ ಕೃಷಿ ಉತ್ಪನ್ನ ರಫ್ತು ನಿಗಮ, ಬೆಂಗಳೂರು |
| 7 | ಕರ್ನಾಟಕ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ, ಬೆಂಗಳೂರು |
| 8 | ಕರ್ನಾಟಕ ರಾಜ್ಯ ಆಗ್ರೋ ಕಾರ್ನ್ ಪ್ರೊಡಕ್ಟ್ಸ್, ಬೆಂಗಳೂರು |
| 9 | ರಾಷ್ಟ್ರೀಯ ಕೃಷಿ ಸಹಕಾರ ಮಾರಾಟ ಮಹಾ ಮಂಡಳ, ಬೆಂಗಳೂರು |
| 10 | ಭಾರತ ಆಹಾರ ನಿಗಮ, ಬೆಂಗಳೂರು |
| 11 | ಕೇಂದ್ರ ಉಗ್ರಾಣ ನಿಗಮ, ಬೆಂಗಳೂರು |
| 12 | ಭಾರತ ಹತ್ತಿ ನಿಗಮ, ಬೆಂಗಳೂರು |
| 13 | ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಬೆಂಗಳೂರು |
| 14 | ಕಾಲಕಾಲಕ್ಕೆ ಸಚಿವ ಸಂಪುಟ ಉಪಸಮಿತಿಯು ಗೊತ್ತುಪಡಿಸಿದ ಇತರ ಸಂಸ್ಥೆ |

6. ಆವರ್ತ ನಿಧಿ:

ಆವರ್ತ ನಿಧಿಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿರುತ್ತದೆ.

1. ರಾಜ್ಯ ಸರ್ಕಾರವು ದಿನಾಂಕ 24.11.1999ರ ವರೆಗೆ ಕಾಲಕಾಲಕ್ಕೆ ಈ ಯೋಜನೆಗೆ ನೀಡಿದ ವಂತಿಗೆ ಮೊತ್ತ.
2. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ದಿನಾಂಕ 24.11.1999ರ ವರೆಗೆ ಕಾಲಕಾಲಕ್ಕೆ ಈ ಯೋಜನೆಗೆ ನೀಡಿದ ವಂತಿಗೆ ಮೊತ್ತ.
3. ಕೇಂದ್ರ ಆಯವ್ಯಯದಿಂದ ದಿನಾಂಕ 24.11.1999ರ ವರೆಗೆ ಮತ್ತು ಕಾಲಕಾಲಕ್ಕೆ ಈ ಯೋಜನೆಗೆ ನೀಡಿದ ವಂತಿಗೆ ಮೊತ್ತ.
4. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) ಅಧಿನಿಯಮ 1966ರ ಮತ್ತು ನಿಯಮಗಳು 1968ರ ರಂ 63 (2) (ಬಿ) (xiii) ಅಡಿ ನೀಡಿದ ವಂತಿಗೆ

7. ಪ್ರಚಾರ:

ಅವಶ್ಯವಿದ್ದು ಕಂಡು ಬಂದಾಗ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಇವರು ಅಗತ್ಯ ಪ್ರಚಾರ ಕೈಗೊಳ್ಳುವರು.

(ಬಿ.ಎಸ್.[illegible])
ಸರ್ಕಾರದ ಅಧೀನ ಕಾರ್ಯದರ್ಶಿ
ಸಹಕಾರ ಇಲಾಖೆ

# ಅನುಬಂಧ -2

## ಎಲ್ ಸಿ ಕ್ಯು 2131

## ರಾಜ್ಯದಲ್ಲಿ ಉತ್ಪಾದನೆಯಾದ ಕೃಷಿ ಉತ್ಪನ್ನಗಳ ಪ್ರಮಾಣ

ಉತ್ಪಾದನೆ:ಲಕ್ಷ ಟನ್ ಗಳಲ್ಲಿ , ಹತ್ತಿ ಉತ್ಪಾದನೆಯು 170 ಕೆ ಜಿ ಲಿಂಟ್ ನ ಲಕ್ಷ ಬೇಲ್ ಗಳಲ್ಲಿ.

| ಕ್ರ. ಸಂ. | ವರ್ಷ | ಬೆಳೆ | ಉತ್ಪಾದನೆ |
|---|---|---|---|
| 1 | 2018-19 | ಏಕದಳ ಧಾನ್ಯಗಳು | 92 |
| | | ದ್ವಿದಳ ಧಾನ್ಯಗಳು | 18.46 |
| | | ಒಟ್ಟು ಆಹಾರ ಧಾನ್ಯಗಳು | 110.46 |
| | | ಎಣ್ಣೆಕಾಳು | 7.92 |
| | | ಹತ್ತಿ | 14 |
| | | ಕಬ್ಬು | 424.11 |
| | | ತಂಬಾಕು | 0.52 |
| 2 | 2019-20 | ಏಕದಳ ಧಾನ್ಯಗಳು | 114.86 |
| | | ದ್ವಿದಳ ಧಾನ್ಯಗಳು | 21.55 |
| | | ಒಟ್ಟು ಆಹಾರ ಧಾನ್ಯಗಳು | 136.41 |
| | | ಎಣ್ಣೆಕಾಳು | 10.41 |
| | | ಹತ್ತಿ | 23.29 |
| | | ಕಬ್ಬು | 360.34 |
| | | ತಂಬಾಕು | 0.83 |
| 3 | 2020-21 | ಏಕದಳ ಧಾನ್ಯಗಳು | 139.61 |
| | | ದ್ವಿದಳ ಧಾನ್ಯಗಳು | 20.66 |
| | | ಒಟ್ಟು ಆಹಾರ ಧಾನ್ಯಗಳು | 160.27 |
| | | ಎಣ್ಣೆಕಾಳು | 12.49 |
| | | ಹತ್ತಿ | 23.17 |
| | | ಕಬ್ಬು | 423.17 |
| | | ತಂಬಾಕು | 0.59 |

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಂತಿಮ ವರದಿ.

Deputy Director of Statistics,
(Agriculture)
Commissionerate of Agriculture.
Seshadri Road, Bangalore.

ಅನುಬಂಧ-3

ಅನುಬಂಧ-3

**2019–20 ರಿಂದ 2021–22 ರವರೆಗೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಖರೀದಿಸಲಾದ ಉತ್ಪನ್ನಗಳ ವಿವರಗಳು**

| ಕ್ರಮ ಸಂ. | ಉತ್ಪನ್ನದ ಹೆಸರು | 2019-20 | | | | 2020-21 | | | | 2021-22 (16.03.2022ರ ಅಂತ್ಯಕ್ಕೆ) | | | |
|---|---|---|---|---|---|---|---|---|---|---|---|---|---|
| | | ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ | ಕೇಂದ್ರ ಸರ್ಕಾರವು ಅನುಮೋದಿಸಿದ ಗರಿಷ್ಠ ಪ್ರಮಾಣ (ಕ್ವಿಂಟಾಲ್‌ಗಳಲ್ಲಿ) | ಖರೀದಿಸಿದ ಪ್ರಮಾಣ (ಕ್ವಿಂಟಾಲ್‌ಗಳಲ್ಲಿ) | ರೈತ ಫಲಾನುಭವಿಗಳ ಸಂಖ್ಯೆ | ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ | ಕೇಂದ್ರ ಸರ್ಕಾರವು ಅನುಮೋದಿಸಿದ ಗರಿಷ್ಠ ಪ್ರಮಾಣ (ಕ್ವಿಂಟಾಲ್‌ಗಳಲ್ಲಿ) | ಖರೀದಿಸಿದ ಪ್ರಮಾಣ (ಕ್ವಿಂಟಾಲ್‌ಗಳಲ್ಲಿ) | ರೈತ ಫಲಾನುಭವಿಗಳ ಸಂಖ್ಯೆ | ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ | ಕೇಂದ್ರ ಸರ್ಕಾರವು ಅನುಮೋದಿಸಿದ ಗರಿಷ್ಠ ಪ್ರಮಾಣ (ಕ್ವಿಂಟಾಲ್‌ಗಳಲ್ಲಿ) | ಖರೀದಿಸಿದ ಪ್ರಮಾಣ (ಕ್ವಿಂಟಾಲ್‌ಗಳಲ್ಲಿ) | ರೈತ ಫಲಾನುಭವಿಗಳ ಸಂಖ್ಯೆ |
| | | | | | | | | | | 6,300/- | 25,00,000 | 1,27,511 | 8,501 |
| 1 | ತೊಗರಿ | 6,100/- | 32,75,000 | 30,57,100 | 3,17,963 | 6,000/- | 65,750 | | | 7,275/- | 3,00,000 | 1,39,383 | 24,855 |
| 2 | ಹೆಸರುಕಾಳು | 7,050/- | 1,22,260 | 58,742 | 14,696 | 7,196/- | 2,17,250 | | | 6,300/- | 1,00,000 | ಮಾರುಕಟ್ಟೆಗಳಲ್ಲಿ ಕೇಂದ್ರ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆಗಿಂತ ಹೆಚ್ಚಿನ ದರ ಇರುವುದರಿಂದ ಯಾವುದೇ ರೈತರು ಖರೀದಿ ಕೇಂದ್ರಗಳಿಗೆ ಬಂದಿರುವುದಿಲ್ಲ | |
| 3 | ಉದ್ದಿನಕಾಳು | 5,700/- | | | | 6,000/- | | | | 6,015/- | 1,80,000 | | |
| 4 | ಸೂರ್ಯಕಾಂತಿ | 5,650/- | | | | 3,880/- | 7,91,750 | | | | | | |
| 5 | ಶೇಂಗಾ | 5,090/- | 6,68,000 | 38,223 | 3,176 | 5,275/- | 7,75,750 | 1,138 | 116 | 5,550/- | 9,10,000 | | |
| 6 | ಕಡಲೆಕಾಳು | 4,875/- | 14,33,900 | 10,17,830 | 1,23,111 | 5,100/- | 16,70,000 | 2,20,146 | 18,232 | 5,230/- | 17,00,000 | 68,026 | 5,424 |
| 7 | ಸೋಯಾಬೀನ್ | 3,710/- | | | | 3,880/- | 7,91,750 | | | 3,950/- | 8,60,000 | | |
| 8 | ಹತ್ತಿ (Medium Staple) | | | | | 5,515/- | | 6,32,168 | 20,124 | | | | |
| 9 | ಹತ್ತಿ Long Staple | | | | | 5,825/- | | | | | | | |
| 10 | ಭತ್ತ (ಸಾಮಾನ್ಯ) | 1,815/- | 5000000 | 6,13,796.60 | 27,123 | 1,868/- | 1,21,00,000 | 20,62,044 | 54,331 | 1,940/- | 50,00,000 | 17,34,082 | 58,027 |
| 11 | ಭತ್ತ(ಗ್ರೇಡ್–ಎ) | | | | | 1,888/- | | | | 1,960/- | | | |
| 12 | ರಾಗಿ | 3,150/- | 2100000 | 19,32,430.60 | 93,100 | 3,295/- | 50,00,000 | 47,53,152 | 2,06,300 | 3,377/- | 21,00,000 | 9,43,984 | 61,606 |
| 13 | ಕೊಬ್ಬರಿ | | | | | 10,300/-+( 1,000/- ಪ್ರೋತ್ಸಾಹ | 3,82,500 | 50,400 | 3,905 | | | 99,999 | 783 |
| 14 | ಜೋಳ (ಹೈಬ್ರಿಡ್) | 2,550/- | 1100000 | 92,563.50 | 2,727 | 2,620/- | 1,00,000 | 8,08,662 | 13,495 | 2,738/- | 11,00,000 | | |
| 15 | (ಮಾಲ್ದಂಡಿ) | 2,570/- | | | | | | | | 2,758/- | | | |
| | ಒಟ್ಟು | | | | 5,81,896 | | | | 3,16,503.00 | | | | 1,59,196 |

ವ್ಯವಸ್ಥಾಪಕ ನಿರ್ದೇಶಕರು